

# ಮರಳು ದಿಣ್ಣೆ

■ ಅನು ಬೆಳ್ಳೆ

## ಕಿರಣನ ಸಹಾಯ ಬಯಸಿದ ಮೇನಕಾ

ಆಜಾನುಬಾಹು ವ್ಯಕ್ತಿಯ ಕಣ್ಣುಗಳಲ್ಲಿ ಸಾಂತ್ವನದ ಹೊಳಹು ಕಂಡಿತು ಹಿತೇಶನಿಗೆ. ಪಾಂಬು ಕಣ್ಮರೆಯಾದ ಬೆನ್ನಲ್ಲೇ ಕಾಣಿಸಿಕೊಂಡಿದ್ದಾನೆ ಈತ. ಈ ಹಿಂದೆಯೂ ಇದೇ ವ್ಯಕ್ತಿ ತನಗೆ ಸಮಾಧಾನ ನೀಡಿದ್ದ. ನಂಬಿಕೆಗೆ ಅರ್ಹನಾದ ವ್ಯಕ್ತಿ. ಯಾವ ಕೆಲಸವನ್ನಾದರೂ ಮಾಡಬಲ್ಲವನು. ಭರವಸೆಯನ್ನು ತುಂಬ ಬಲ್ಲ ನಂಬಿಕಸ್ಥ.

ಎದ್ದು ನಿಂತ ಹಿತೇಶನ ಭುಜಗಳನ್ನು ಆತ್ಮೀಯತೆಯಿಂದ ಒತ್ತಿದ ವ್ಯಕ್ತಿ ನಸು ನಕ್ಕ. ಆ ನಗುವಿನಲ್ಲಿ ತನ್ನ ಕಷ್ಟವನ್ನು ತಿಳಿದುಕೊಂಡಿರುವಂತೆ ಕಂಡಿತು ಹಿತೇಶನಿಗೆ. ಸಮಾಧಾನದ ನಿಟ್ಟುಸಿರು ಚೆಲ್ಲಿ ಅವನತ್ತ ನೋಡಿದ.

'ಮರಳು ದಂಡೆಯ ಮೇಲೆ ಸುಮ್ನೆ ಅಲೆದಾಡ್ತಿದ್ದೀಯಾ. ಹಾಗಂತ ಹೇಳ್ದೋನು ಪಾಂಬು. ಪಾಂಬುವಿಗೆ ನಿನ್ನ ಕಷ್ಟ ಅರ್ಥವಾಗ್ಲಿಲ್ಲ ಇನ್ನೂ...' ಮಾತು ಅರ್ಧಕ್ಕೆ ನಿಲ್ಲಿಸಿದ ವ್ಯಕ್ತಿಯಿಂದ ನೋಟ ಕಿತ್ತ ಹತಾಶೆಯ ಯುವಕ.

'ನನ್ನ ಸಹಾಯಕ್ಕೆ ಯಾರೂ ಇಲ್ಲ ಅಂದ್ಕೊಂಡಿದ್ದೀನಿ. ಅದಕ್ಕಾಗಿ ನನ್ನ ಅಲೆದಾಟ. ಪಾಂಬು ಭರವಸೆ ನೀಡಿದ್ರೂ ನನ್ನಿಂದ ಅವನಿಗೇನೂ ಪ್ರತಿಫಲ ಸಿಗೋದಿಲ್ಲ. ಅದ್ಕೆ ದೂರಾನೇ ಉಳಿದಿದ್ದಾನೆ' ಪಾಂಬುವನ್ನು ದೂರಿದ್ದಲ್ಲವಾದರೂ ಅವನ ಬಗ್ಗೆ ತಾನಿಟ್ಟಿದ್ದ ನಂಬುಗೆಯನ್ನು ಹೇಳಿದ. ಎದುರಿಗೆ ನಿಂತಿದ್ದ ವ್ಯಕ್ತಿ ಅವನ ಭುಜದ ಮೇಲಿಂದ ಕೈಯನ್ನು ಸರಿಸಿ ಮುಂದಕ್ಕೆ ಹೆಜ್ಜೆ ಹೊರಳಿಸಿ ನೀಲ ನೀರಿನತ್ತ ನೋಡಿದ.

'ಈ ಸಮುದ್ರದ ನೀರಿನ ರಾಶಿಗೆ ಬಿದ್ದ ಒಂದು ಸಮಸ್ಯೆ ನಿನ್ನದು. ಆ ಸಮಸ್ಯೆನ ಬಗೆಹರಿಸೋದು ಅಷ್ಟು ಸುಲಭ ಅಲ್ಲ' ಹೊಸದೊಂದು ವಾಕ್ಯವನ್ನು ಕೊಟ್ಟ ಎದುರಿಗಿನ ವ್ಯಕ್ತಿ. ಯುವಕನ ಕಣ್ಣುಗಳಲ್ಲಿ ಹತಾಶೆ, ನಿರಾಶೆ ಸುಖಗಳೆಲ್ಲವೂ ಮಿಳಿತವಾಗಿತ್ತು. ಒಂಟಿ ಸಲಗದಂತೆ ಈ ಸಮಸ್ಯೆಯನ್ನು ಎದುರಿಸಬೇಕು.

'ಮತ್ತೆ ನನ್ನಲ್ಲಿ ನಿರಾಶೆ ತುಂಬೋ ಮಾತುಗಳಿವು ಮುತ್ತುಚಾಂಡಿ'

ಮುತ್ತುಚಾಂಡಿ ಯುವಕನತ್ತ ತಿರುಗಿದ. ಅವನಲ್ಲಿದ್ದ ಹತಾಶೆಯ ನೋಟಕ್ಕೆ ಮರುಗಿದ.

'ಕಳೆದುಕೊಂಡಿರೋನು ನೀನು. ಕಣ್ಮರೆಯಾಗಿರೋದು ನೀನು ಪ್ರೀತಿಸ್ತಿದ್ದ ಹುಡುಗಿ. ಅವಳೇನೂ ಈ ಮರಳು ದಿಣ್ಣೆಯಲ್ಲಿ ಮುಚ್ಚಿ ಹೋಗ್ಲಿಲ್ಲ, ನೀನು ದಿನವಿಡೀ ಈ ಮರಳು ದಿಣ್ಣೆಯಲ್ಲಿ ಅಲೆದಾಡೋಕೆ. ನೇರವಾಗಿ ಪೊಲೀಸ್ ಕಂಪ್ಲೇಂಟ್ ಕೊಟ್ಟು ಆರಾಮವಾಗಿರಬಹುದಿತ್ತು. ಕಣ್ಮರೆಯಾದವಳನ್ನು ಹುಡುಕೋದು ಅವರ ಕೆಲಸ. ಅದನ್ನು ಬಿಟ್ಟು ಇಲ್ಲಿ ಯಾವುದೋ ವಸ್ತು ಕಳೆದು ಹೋದ ಹಾಗೆ ಹುಡುಕಾಟ ನಡೆಸುತ್ತಿರುವುದು ಸರಿಯಲ್ಲ' ಸಮಸ್ಯೆಯೊಂದಕ್ಕೆ ಪರಿಹಾರ ಸೂಚಿಸಿದಂತೆ ಸುಲಭವಾಗಿ ತಿಳಿಸಿದ.

'ಮುತ್ತುಚಾಂಡಿ, ನನ್ನ ಸಮಸ್ಯೇನಾ ನಾನು ಅಷ್ಟು ಸುಲಭದಲ್ಲಿ ಪರಿಹರಿಸೋದಿಕ್ಕೆ ಸಾಧ್ಯವಿಲ್ಲ. ಈ ವಿಷಯಾನ ನಾನು ಪಾಂಬುಗೆ ಹೇಳಿದ್ದೆ. ಪೊಲೀಸರಿಂದ ಇದಕ್ಕೆ ಉತ್ತರ ಸಿಗಲಾರದು. ಆದರೂ ಅವರಿಗೆ ಈಗಾಗಲೇ ಸುದ್ದಿ ತಲುಪಿದೆ. ಆ ಹುಡುಗಿಯ ಹಿಂದೆ ಒಬ್ಬ ಯುವಕ ಅಲೆಯುತ್ತಿದ್ದ ಅನ್ನೋ ಗುಮಾನೀನೂ ಅವರಿಗಿದೆ. ಈ ವಿಷ್ಯದಲ್ಲಿ ಪಾಂಬು ನನ್ನ ಪೊಲೀಸರಿಗೆ ಒಪ್ಪಿಸೋದಿಕ್ಕೆ ತಯಾರಾಗಿದ್ದಾನೆ. ಅದೇ ನನ್ನನ್ನು ಇನ್ನಷ್ಟು ಅಧಃಪತನಕ್ಕೆಳೆಯುತ್ತಿದೆ' ಹತಾಶೆಯ ದನಿಯ ಹಿಂದೆ ಭಯವೂ, ಭಂಡ ಧೈರ್ಯವೂ ತುಂಬಿತ್ತು.